ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 2, Sep-Oct, 29-35
©*IIMRD*, Mysuru
IIMRD JOURNALS
www.iimrd.com

# ಇರುಳಿಗ ಬುಡಕಟ್ಟು ಸಮುದಾಯ: ಒಂದು ಮಾನವಶಾಸ್ತ್ರೀಯ ಅಧ್ಯಯನ

**ದಿನೇಶ ಕೆ. ಡಿ[*] ; ಪ್ರೊ. ಎಂ. ಆರ್. ಗಂಗಾಧರ್[**]**
[*]ಸಂಶೋಧನಾ ವಿದ್ಯಾರ್ಥಿ; [**]ಪ್ರಾಧ್ಯಾಪಕರು.
ಮಾನವಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು.

***ಸಾರಾಂಶ* (Abstract)**

*ಭಾರತದಲ್ಲಿ ಹಲವಾರು ಸಮುದಾಯಗಳು ತಮ್ಮದೇಯಾದ ಆಚಾರ-ವಿಚಾರ, ನಂಬಿಕೆ ಮತ್ತು ಪದ್ಧತಿಗಳೊಂದಿಗೆ ಜೀವನ ಸಾಗಿಸುತ್ತಿದ್ದಾರೆ. ಅಂತಹ ಸಮುದಾಯಗಳಲ್ಲಿ ದೇಶದ ಮೂಲ ನಿವಾಸಿಗಳಾದ ಬುಡಕಟ್ಟು ಸಮುದಾಯಗಳು ಕೂಡ ಒಂದು. ಭಾರತದಲ್ಲಿ ಎಲ್ಲಾ ಭಾಗಗಳಲ್ಲಿಯೂ ಕೂಡ ಬುಡಕಟ್ಟು ಜನರಿದ್ದು, 2011 ನೇ ಜನಗಣತಿ ಪ್ರಕಾರ 705 ಸಮುದಾಯಗಳನ್ನು ಪರಿಶಿಷ್ಟ ಬುಡಕಟ್ಟು ಗುಂಪಿಗೆ ಸೇರಿಸಲಾಗಿದೆ. ಕರ್ನಾಟಕದಲ್ಲಿಯೂ ಕೂಡ ಒಟ್ಟು 50 ಸಮುದಾಯಗಳನ್ನು ಪರಿಶಿಷ್ಟ ಬುಡಕಟ್ಟು ಪಟ್ಟಿಗೆ ಸೇರಿಸಿದ್ದು, ಅವುಗಳಲ್ಲಿ ಇರುಳಿಗ ಬುಡಕಟ್ಟು ಸಮುದಾಯವು ಕೂಡ ಒಂದಾಗಿದೆ. ಇರುಳಿಗ ಪ್ರಮುಖವಾಗಿ ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹೆಚ್ಚಾಗಿ ನೆಲೆಸಿದ್ದು, ಪ್ರಸ್ತುತ ಲೇಖನದಲ್ಲಿ ಇರುಳಿಗ ಬುಡಕಟ್ಟು ಸಮುದಾಯದ ಜೀವನ ಪದ್ಧತಿ, ಅವರ ಸಮಸ್ಯೆಗಳು ಮತ್ತು ಸಮಸ್ಯೆಗಳಿಗೆ ಪರಿಹಾರಗಳೇನು ಎಂಬುದನ್ನು ಪರಿಶೋಧಿಸಲಾಗಿದೆ.*

***ಮುಖ್ಯಪದಗಳು* (Keywords):** ಇರುಳಿಗ, ಇಲ್ಲಿಗರು, ಕೃಷ್ಣಗಿರಿ, ಬುಡಕಟ್ಟು ಸಮುದಾಯ, ಬೆಂಗಳೂರು ಗ್ರಾಮಾಂತರ, ರಾಮನಗರ.

## ಪೀಠಿಕೆ

ಭಾರತದ ಬುಡಕಟ್ಟು ಸಮುದಾಯಗಳಲ್ಲಿ ಇರುಳಿಗ ಬುಡಕಟ್ಟು ಸಮುದಾಯವಾಗಿದ್ದು, ಇವರು ಪ್ರಮುಖವಾಗಿ ದಕ್ಷಿಣ ಭಾರತದ ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ ಮತ್ತು ಕೇರಳ ರಾಜ್ಯಗಳ ಪಶ್ಚಿಮ ಘಟ್ಟಗಳಲ್ಲಿ ಹರಡಿಕೊಂಡಿದ್ದಾರೆ. ಇವರು ಕರ್ನಾಟಕದ ಬೆಂಗಳೂರು ಮತ್ತು ರಾಮನಗರ ಜಿಲ್ಲೆಯಾದ್ಯಂತ ಹಾಗೂ ತಮಿಳುನಾಡಿನ ನೀಲಗಿರಿ, ಕೊಯಮತ್ತೂರು, ಸತ್ಯಮಂಗಲಂ ಮತ್ತು ಕೃಷ್ಣಗಿರಿ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಕರ್ನಾಟಕದಲ್ಲಿ ಇವರನ್ನು ಇರುಳಿಗರು ಇಲ್ಲಿಗರು, ಕಾಡುಪೂಜಾರಿಗಳು ಎಂದೂ ಕರೆದರೆ, ಅದೇ ತಮಿಳುನಾಡಿನಲ್ಲಿ ಇರುಳ, ಇರುಳರ್ ಎಂದು ಕರೆಯುತ್ತಾರೆ.

*Please cite this article as: ದಿನೇಶ ಕೆ. ಡಿ. ; ಎಂ. ಆರ್. ಗಂಗಾಧರ್. (2021).* ಇರುಳಿಗ ಬುಡಕಟ್ಟು ಸಮುದಾಯ: ಒಂದು ಮಾನವಶಾಸ್ತ್ರೀಯ ಅಧ್ಯಯನ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(2). ಪು.ಸಂ. 29–35*

ತಮಿಳುನಾಡಿನಲ್ಲಿ ಇರುವ ಇರುಳಿಗರಲ್ಲಿ ಕುಪ್ಪೆ, ಕಂಪೆ, ಪುಂಗೆ, ಕಾಲಕಟ್ಯೆ, ಪಿರಾಡ, ಕೊಡುವೆ, ಕುರುನಾಗ, ದೇವಾಣೆ, ಕುಪ್ಪಿಲೆ, ಉಪ್ಪಿಲಿ, ವೆಲ್ಲೆ, ಅರುಮುಪ್ಪು ಮತ್ತು ಪೊರಿಗ ಕುಲಗಳು ಕಂಡು ಬಂದರೆ, ಕರ್ನಾಟಕದಲ್ಲಿ ದಾಸಕುಲ ಮತ್ತು ಮುಳ್ಳುಕುಲಗಳು ಪ್ರಮುಖವಾಗಿ ಕಂಡು ಬರುತ್ತವೆ. ಇವರು ಒಂದೇ ಕುಲ ಅಥವಾ ಬಳಿಯಲ್ಲಿ ಮದುವೆಯಾಗುವುದಿಲ್ಲ. ಇವರಲ್ಲಿ ಅಳಿಯ ಕಟ್ಟಿನ ಮಾತೃ ಪ್ರಧಾನ ಕುಟುಂಬ ಪದ್ಧತಿ ಕಂಡುಬರುತ್ತದೆ. ಕುಟುಂಬದ ಆಸ್ತಿಯ ಒಡೆತನ ಮಗಳಿಗೆ ಮಾತ್ರ ಸೇರುತ್ತದೆ. ಹೆಣ್ಣು ಮಕ್ಕಳು ಇಲ್ಲದಿದ್ದರೆ ಗಂಡು ಮಕ್ಕಳಿಗೆ ಸೇರುತ್ತದೆ. ಇವರಲ್ಲಿ ಒಳಾಡಳಿತ ವ್ಯವಸ್ಥೆಯಲ್ಲಿ ತಮ್ಮ ಕುಲಕ್ಕೆ ನಾಡಗೌಡ, ಕುಲದಗೌಡ, ಕಟ್ಟುಗೌಡ, ಗಡಿಗೌಡ, ಕೋಲಕಾರ ಅಥವಾ ಉದ್ದಾರಿ ಎಂಬ ಪಂಚರನ್ನು ಹೊಂದಿದ ಪಂಚಾಯಿತಿ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ.

**ಶಾರೀರಿಕ ಲಕ್ಷಣ**

ಥರ್‌ಸ್ಟನ್.ಈ. (1909) ರವರು "Caste and tribes of southern India" ಸಂಪುಟದಲ್ಲಿ ಇರುಳಿಗ ಸಮುದಾಯದ ಶಾರೀರಿಕ ಲಕ್ಷಣಗಳನ್ನು ತಿಳಿಸಿದ್ದು, ಅವರ ಮೈಬಣ್ಣ ಕುರಿತಂತೆ "ಸಾಧ್ಯವಾದರೆ ಕಪ್ಪು ಖನಿಜವಾದ ಕಲ್ಲಿದ್ದಲಿನಲ್ಲಿ ಬಿಳಿಯ ಕಲೆಗಳನ್ನು ಕಾಣಬಹುದು. ಆದರೆ ಇರುಳಿಗರು ಇರುಳಿನಷ್ಟೆ ಕಪ್ಪು ಬಣ್ಣದಿಂದ ಕೂಡಿರುತ್ತಾರೆ". ಎಂದಿದ್ದಾರೆ. ಎಣ್ಣೆ ಕಾಣದ ಕಂದು ಬಣ್ಣದ ಗುಂಗುರು ಕೂದಲು ದಪ್ಪ ತುಟಿ, ಉಬ್ಬಿದ ಹಲ್ಲುಗಳು ಮತ್ತು ಉಬ್ಬಿದ ದವಡೆ ದಪ್ಪ ಮೂಗು ಅಗಲವಾದ ಹಣೆಗಳಿಂದ ಕೂಡಿರುತ್ತಾರೆ. ಅಗಲವಾದ ಮೂಗಿನ ಹೊಳ್ಳೆಗಳಿಂದ ಕೂಡಿದ್ದು ಆಫ್ರಿಕಾದ ನೀಗ್ರೋಗಳ ನೆನಪು ತರಿಸುವಂತೆ ಅಥವಾ ಉತ್ತರ ಕನ್ನಡದ ಸಿದ್ಧಿಗಳ ಹೋಲಿಕೆಯನ್ನು ಇರುಳಿಗರಲ್ಲಿ ಕಾಣಬಹುದು, ಎಂಬುದಾಗಿ ಹೇಳಿದ್ದಾರೆ.

ಎಲ್.ಕೆ. ಅನಂತಕೃಷ್ಣ ಅಯ್ಯರ್ ಅವರು "The Mysore Tribes and Castes, Vol. III. Mysore University, Mysore." ನಲ್ಲಿ ಕಾಡುಕುರುಬ, ಜೇನುಕುರುಬ, ಬಡಗ, ಸೋಲಿಗ, ಯರವ, ಪಳ್ಳಿಯನ್, ಕಾಡಾರ, ಕಟ್ಟುನಾಯಕನ್ ಇತ್ಯಾದಿ ಬುಡಕಟ್ಟುಗಳ ಅಂಗರಚನೆಯನ್ನೇ ಇರುಳಿಗರೂ ಹೋಲುತ್ತಾರೆ. ಇತ್ತಿಚಿಗೆ ಅವರ ಬಣ್ಣ ಕೂಡ ಬದಲಾಗುತ್ತಿದೆ. ತಲೆಕೂದಲು ಮಾತ್ರ ಹೆಂಗಸರು ಮತ್ತು ಗಂಡಸರು ಇಬ್ಬರಲ್ಲಿಯೂ ಗುಂಗುರಾಗಿಯೇ ಇದೆ. ಕ್ಷೌರಿಕರ ಬಳಿಗೆ ಹೋಗಬೇಕಾದ ಅವಶ್ಯಕತೆಯೇ ಇಲ್ಲದಷ್ಟು ಕೂದಲು ಸುರುಳಿ ಸುರುಳಿಯಾಗಿ ಸುತ್ತಿಕೊಂಡಿರುತ್ತದೆ. ಗಂಡಸರ ಮುಖಗಳಲ್ಲಿ ದಟ್ಟವಾದ ಗಡ್ಡಮೀಸೆಗಳು ಕಾಣುವುದಿಲ್ಲ ಬಲಿಷ್ಟವಾದ ಮಾಂಸ ಖಂಡಗಳಿಂದ ಕೂಡಿದವರಾಗಿದ್ದು ತುಂಬಾ ಬಲಶಾಲಿಗಳಾಗಿರುತ್ತಾರೆ. ತೀಕ್ಷ್ಣವಾದ ಕಣ್ಣುಗಳಿಂದ ಕೂಡಿದ್ದು ಶಬ್ದವನ್ನು ಚೆನ್ನಾಗಿ ಗ್ರಹಿಸುವ ಸೂಕ್ಷ್ಮಗ್ರಾಹಿ ಕಿವಿಗಳನ್ನು ಹೊಂದಿದವರಾಗಿದ್ದಾರೆ.

**ಉಡುಗೆ ತೊಡಿಗೆಗಳು**

ಆದಿವಾಸಿಗಳಾದ ಇರುಳಿಗರು ಗವಿ–ಗುಹ್ವಾರಗಳಲ್ಲಿ ವಾಸಿಸುತ್ತಿದ್ದಾಗ ಮರದ ತೊಗಟೆ ಮುತ್ತುಗದೆಲೆಯ ಉಡುಪುಗಳಿಂದ ಮಾನ ಮುಚ್ಚಿಕೊಳ್ಳುತ್ತಿದ್ದರಂತೆ. ಮುಂದೆ ಗಂಡಸರು ಸೊಂಟಕ್ಕೆ ಒಂದು ಪುಟಕೋಸಿ, ಹೆಂಗಸರು ಮೊಣಕಾಲ ಮೇಲೆ ಒಂದು ಅರಿವೆಯ ತುಂಡನ್ನು ಸುತ್ತಿಕೊಳ್ಳುತ್ತಿದ್ದರು. ಕುಪ್ಪಸ ಇರುತ್ತಿರಲಿಲ್ಲ, ನಂತರ ಗಂಡಸರು ಪಂಚೆ ಉಟ್ಟುಕೊಳ್ಳುವಂತಾದರು. ಕೆಂಪು ಸಾಣೆ ಮಣ್ಣಿನ ಬಳೆಗಳಿದ್ದು

ಹೆಂಗಸರು ಒಂದೊಂದು ಕೈಗೆ ಒಂದೊಂದೆ ಬಳೆ ತೊಟ್ಟುಕೊಳ್ಳುತ್ತಿದ್ದರು. ಮುಂದುವರಿಯುತ್ತಾ ತೋಳಿಗೆ ತೋಳಬಂದಿ, ಬೆಳ್ಳಿಯ ಕಾಲುಂಗುರ ಹಾಕಿಕೊಳ್ಳಲಾರಂಭಿಸಿದರು. ಬೆಳ್ಳಿಕುಲದವರಾದರೆ ಅದನ್ನು ಹಾಕುವಂತಿಲ್ಲ ಈಗಲೂ ಬೆಳ್ಳಿಕುಲದವರು ಕಾಲುಂಗರ ಧರಿಸುವುದಿಲ್ಲ, ಮುಳ್ಳು ಕುಲದವರು ಮಾತ್ರ ಕಾಲುಂಗುರಗಳನ್ನು ಧರಿಸುತ್ತಾರೆ. ಈಗಲೂ ಕೆಲವು ಇರುಳಿಗ ಮುದುಕಿಯರಲ್ಲಿ ಹಳೆಯ ತಲೆಮಾರಿನ ಉಡುಗೆ ತೊಡುಗೆಗಳು ಉಳಿದಿವೆ ಬಂಗಾರ ಇತ್ಯಾದಿಗಳು ಅವರಿಗೆ ಗೊತ್ತಿಲ್ಲ, ಎಂದು ಈ ಸಮುದಾಯದವರು ಹೇಳುತ್ತಾರೆ.

ಇತ್ತೀಚಿನ ದಿನಗಳಲ್ಲಿ ಸೀರೆ ಕುಪ್ಪಸ, ವಿವಿಧ ಬಗೆಯ ಸರಗಳು, ಓಲೆ, ಮೂಗುತಿಯನ್ನು ಧರಿಸುತ್ತಾರೆ. ಹುಡಗರು ಪ್ಯಾಂಟ್‌ಗಳನ್ನು ಧರಿಸುತ್ತಿದ್ದಾರೆ. ಬಣ್ಣದ ಉಡುಪುಗಳು, ರೇಷ್ಮೆ ಸೀರೆಗಳು ಸಹ ಕೆಲವು ಇರುಳಿಗರ ಮನೆಗಳನ್ನು ಸೇರಿ ಅವರ ದೇಹವನ್ನು ಅಲಂಕರಿಸುತ್ತಿವೆ. ತಾಳೆಗರಿಯ ಸುರುಳಿಗಳನ್ನು ಧರಿಸಿ ಅಗಲವಾಗುತ್ತಿದ್ದ ಕಿವಿಯ ಅಲೆಗಳು ಓಲೆಯಿಂದ ಶೃಂಗಾರಗೊಳ್ಳುತ್ತಿವೆ. ಮೂಗುತಿಯನ್ನು ಧರಿಸುತ್ತಿದ್ದಾರೆ.

**ವಾಸಸ್ಥಳ**

ಇರುಳಿಗರು ಮುಖ್ಯವಾಗಿ ಕರ್ನಾಟಕದ ರಾಮನಗರ ಜಿಲ್ಲೆಯಲ್ಲಿ ವ್ಯಾಪಕವಾಗಿದ್ದಾರೆ. ಮಾಗಡಿ ತಾಲೂಕಿನ ಸಾವನದುರ್ಗದ ಸುತ್ತಲ ಬೆಟ್ಟ ಹಾಗೂ ದಟ್ಟವಾದ ಕಾಡು ಪ್ರದೇಶಗಳಲ್ಲಿ ರಾಮನಗರದ ಸುತ್ತಮುತ್ತಲ ಕಾಡು–ಕಣಿವೆಗಳಲ್ಲಿ ಮತ್ತು ಕನಕಪುರ ತಾಲ್ಲೂಕಿನಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಒಂದೊಂದೆಡೆ ಒಂಟಿ ಗುಡಿಸಲಿನಿಂದ ಹಿಡಿದು 50 ಮನೆಗಳವರೆಗೂ ಇರುವ ಇರುಳಿಗರ ದೊಡ್ಡಿಗಳನ್ನು ಕಾಣಬಹುದು. ಬೆಟ್ಟ–ಗುಡ್ಡಗಳು, ಅರಣ್ಯ ಪ್ರದೇಶ, ಮಳೆ–ಗಾಳಿಗಳಿಂದ ರಕ್ಷಣೆ ದೊರಕುವ ನಿಸರ್ಗದತ್ತ ಬಂಡೆಗಳ ಮರೆಯಲ್ಲಿ, ಹುಣಿಸೆ, ಸೀಗೆ, ಬಿದಿರು, ಬೇಲ, ಆಲೆ, ಬೆಪ್ಪಾಲೆ, ಅಲ, ಕಲ್ಲುತೇಗ, ದಿಂಡಿಗ, ಗಂಧ, ಬಾಡುಬಕ್ಕ, ಲಾಂಟಾನ, ನೇರಳೆ, ಮಾವು, ಬೇವು, ಚುಜ್ಜಲಿ, ಮರಾಳ ಅಂಟುವಾಳ ಮುಂತಾದ ಮರಗಳಿಂದ ಕೂಡಿದ ವನಪ್ರದೇಶ, ಕುಮುದ್ವತಿ, ಕಣ್ವ, ಅರ್ಕಾವತಿ ನದಿಗಳಿಗೆ ಸೇರುವ ಹಳ್ಳಕೊಳ್ಳಗಳು, ಉಪನದಿಗಳು, ವಿಶಾಲವಾದ ಅರೆಬಂಡೆಗಳ ಮೇಲೆ ನಿಸರ್ಗದತ್ತವಾಗಿ ನಿರ್ಮಾಣಗೊಂಡ ಸೊಣೆ ಅಥವಾ ಕೊಳಗಳು ಇರುವ ಅಂದರೆ ನೀರಿಗೆ ಅನುಕೂಲಕರವಾದ ಪ್ರದೇಶಗಳೇ ಇವರ ವಾಸಸ್ಥಳಗಳಾಗಿವೆ.

**ಮನೆಗಳ ರಚನೆ**

ಇರುಳಿಗರು ಕಾಡಿನಲ್ಲಿದ್ದಾಗ ಗುಹೆಗಳಲ್ಲಿ ವಾಸ ಮಾಡುತ್ತಿದ್ದರು. ಆದರೆ ಕಾಡಿನಿಂದ ಹೊರಬಂದ ಮೇಲೆ ಬೆಟ್ಟದ ತಪ್ಪಲಿನಲ್ಲಿ ಸಣ್ಣಪುಟ್ಟ ಗುಡಿಸಿಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಗುಡಿಸಲನ್ನು ನಿರ್ಮಿಸುವಾಗ ಸ್ಥಳೀಯವಾಗಿ ದೊರೆಯುವ ವಸ್ತುಗಳನ್ನು ಬಳಸುತ್ತಾರೆ. ಇರುಳಿಗರು ಸಾಮಾನ್ಯವಾಗಿ ಬಾಗಿಲನ್ನು ಸೂರ್ಯ ಹುಟ್ಟುವ ದಿಕ್ಕಿಗೆ (ಪೂರ್ವಕ್ಕೆ) ಇಟ್ಟುಕೊಳ್ಳುತ್ತಾರೆ. ಇತ್ತೀಚಿಗೆ ಸರ್ಕಾರ ಇವರನ್ನು ಗುರುತಿಸಿ ಮನೆಗಳನ್ನು ನಿರ್ಮಿಸಿಕೊಡುತ್ತಿದೆ. ಕುಮರಿ ಬೇಸಾಯದಿಂದ ಮುಂದುವರಿದು ಜಮೀನನ್ನು ತಮ್ಮದನ್ನಾಗಿಯೇ ಉಳಿಸಿಕೊಂಡಿರುವ ಕೆಲವರು ಹೆಂಚಿನ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಸಾಮಾನ್ಯವಾಗಿ ಇರುಳಿಗರ ಕೇರಿಯ ಮನೆಗಳು ಎರಡು ಸಾಲಿನಲ್ಲಿದ್ದು ಮಧ್ಯ ಬಯಲಿರುತ್ತದೆ. ಹೆಂಚಿನ ಮನೆಗಳನ್ನು ಕಾಣಬೇಕಾದ ಕುಟುಂಬಗಳು ಇನ್ನೂ ಶೇಕಡಾ ಎಪ್ಪತ್ತೈದರಷ್ಟಿದೆ.

**ಆಹಾರ ಪದ್ಧತಿ**

ಇರುಳಿಗರು ಮಾಂಸ ಮತ್ತು ಸಸ್ಯಾಹಾರಗಳೆರಡನ್ನೂ ಬಳಸುತ್ತಾರೆ. ಕಾಡಿನಲ್ಲಿ ಸಿಗುತ್ತಿದ್ದ ವಿವಿಧ ಗೆಡ್ಡೆ–ಗೆಣಸುಗಳು. ಸೊಪ್ಪು, ವಿವಿಧ ಪ್ರಾಣಿ–ಪಕ್ಷಿಗಳ ಮಾಂಸಗಳನ್ನು ಹೆಚ್ಚು ಆಹಾರವಾಗಿ ಬಳಸುತ್ತಿದ್ದರು. ಇತ್ತೀಚೆಗೆ ರಾಗಿ ಭತ್ತಗಳನ್ನು ಬಳಸುತ್ತಿದ್ದಾರೆ. ಬಿದಿರಕ್ಕಿಯನ್ನು ನೀರು ತುಂಬಿದ ಬಿದರಿನೊಳಕ್ಕೆ ಹಾಕಿ ಬೆಂಕಿಯಲ್ಲಿ ಬೇಯಿಸಿ ತಿನ್ನುತ್ತಿದ್ದ ಬಗೆಗೆ ತಿಳಿಸುತ್ತಾರೆ. ಇಂದು ನಿತ್ಯ ಬದುಕಿಗೆ ಆಧಾರವಾದ ಸಸ್ಯಾಹಾರ ರಾಗಿ ಮುದ್ದೆ ಮತ್ತು ಸೊಪ್ಪಿನ ಸಾರುಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ. ಕೆಲವೊಮ್ಮೆ ಬೆಳಗಿನ ಉಪಾಹಾರಕ್ಕಾಗಿ ರಾಗಿ ರೊಟ್ಟಿ ಮಾಡಿಕೊಂಡು ಮೆಣಸಿನಕಾಯಿಯ ಜೊತೆ ತಿನ್ನುತ್ತಾರೆ. ರೊಟ್ಟಿಗೆ "ವಾಟ" ಎಂದು ಕರೆಯುತ್ತಾರೆ. ರೊಟ್ಟಿ ಎತ್ತುವ ಕುರ್ಪಿಯನ್ನು "ವಾಟಕಟ್ಟಿ" ಎಂದು ಹೆಸರಿಸುತ್ತಾರೆ. ಮುದ್ದೆಯ ಮಡಕೆಗೆ "ಕಳಿಸೆಟ್ಟಿ" ಎಂದು ಕರೆಯುತ್ತಾರೆ. ಇಂದಿಗೂ ಇರುಳಿಗರಲ್ಲಿ ಪ್ರತಿಯೊಬ್ಬರೂ ಸಂಕ್ರಾಂತಿ ಹಬ್ಬಕ್ಕೆ ಕಾಡುಗೆಣಸನ್ನು ಅಗೆದು ತಂದು ಹಳಗೆಯಲ್ಲಿ ಬೇಯಿಸಿ ಬೆಲ್ಲ, ಜೇನು ಸೇರಿಸಿ ತಿನ್ನಲೇಬೇಕೆಂಬ ನಿಯಮವಿದೆ. ಕೆರೆಯಲ್ಲಿ ಸಿಗುವ ಗೆಂಡೆಗಳನ್ನು ಕಿತ್ತು ಕಲ್ಲಿನ ಮೇಲೆ ಉಜ್ಜಿ ಸಾರು ಮಾಡಿ ತಿನ್ನುತ್ತಾರೆ. ಕಾಡಿನಲ್ಲಿ ಸಿಗುವ ಹಲವಾರು ಗೆಡ್ಡೆ–ಗೆಣಸು, ಸೊಪ್ಪು, ಗೆಂಡೆ ಇತ್ಯಾದಿಗಳ ಸ್ವಾದಿಷ್ಟಭರಿತವಾದ ಖಾದ್ಯಗಳ ರುಚಿಯನ್ನು ನನ್ನ ಕ್ಷೇತ್ರಕಾರ್ಯದ ಅವಧಿಯಲ್ಲಿ ತೋರಿಸಿದ್ದಾರೆ. ಇರುಳಿಗರು ಹಲವಾರು ಬಗೆಯ ಸ್ವಾದಿಷ್ಟಭರಿತವಾದ ಸೊಪ್ಪುಗಳನ್ನು ಆಹಾರಕ್ಕಾಗಿ ಬಳಸುತ್ತಾರೆ.

ಅಣ್ಣೆಸೊಪ್ಪು, ಅವರೆಳೆಸೊಪ್ಪು, ಅರೆಚಿಟ್ಟನಸೊಪ್ಪು, ಆಗಲಸೊಪ್ಪು, ಉತ್ತರಾಣಿಸೊಪ್ಪು, ಏರಿಸಾಸಿವೆಸೊಪ್ಪು, ಒಡ್ಡಾಣಿಕೆಸೊಪ್ಪು, ಒಂದೆಲಗಸೊಪ್ಪು, ಕಟ್ಟೇಸೊಪ್ಪು, ಕಡ(ಕಾಡು)ಸೀಗೆಸೊಪ್ಪು, ಕನ್ನೆಸೊಪ್ಪು, ಕಾಮಾಲೆಸೊಪ್ಪು, ಕೀರಸೊಪ್ಪು, ಕುಂಬಳಸೊಪ್ಪು, ಕೆಸ, ಕೆಂಜಗದಸೊಪ್ಪು, ಕೆಂಪುಗಣಿಕಸೊಪ್ಪು, ಕೊಮ್ಮೆಸೊಪ್ಪು, ಕೊರಳಣಿಕೆಸೊಪ್ಪು, ಕೋಲುತೊಗಚೆಸೊಪ್ಪು, ಗಣಿಕಸೊಪ್ಪು, ಮುಂತಾದ ಸೊಪ್ಪುಗಳ ಜೊತೆಗೆ ಅಡಾವಣ್ಣು, ಅನಾದಿಹಣ್ಣು, ಅಮಟೆಹಣ್ಣು, ಅಂಕೋಲೆಹಣ್ಣು, ಅಂದಾಲಹಣ್ಣು, ಅಗಲಹಣ್ಣು, ಆಲದಹಣ್ಣು, ಈಜಿಹಣ್ಣು, ಈಚಲಹಣ್ಣು, ಉಳುಪಹಣ್ಣು, ಉಣ್ಣೆಹಣ್ಣು, ಎಲಚಿಹಣ್ಣು, ಕತ್ತರಿಹಣ್ಣು, ಕಂಬಿಹಣ್ಣು, ಕರ್ಬೆಹಣ್ಣು, ಕಾರೆ ಮುಂತಾದ ಹಣ್ಣುಗಳನ್ನು ಬಳಸುತ್ತಾರೆ.

ಸೊಪ್ಪು ಹಣ್ಣುಗಳ ಜೊತೆಗೆ ಅಳಿಲುಮಾಂಸ, ಆಮೆಮಾಂಸ, ಇಲಿಮಾಂಸ, ಉಡನಮಾಂಸ, ಕಡವೆಮಾಂಸ, ಕಪಿ(ಮಂಗನ)ಮಾಂಸ, ಕರಡಿಮಾಂಸ, ಕರಿಕೊತ್ತಿಮಾಂಸ, ಕಾಟಿಮಾಂಸ, ಕಾಡುಕೋಳಿಮಾಂಸ, ಕಾಡುಬೆಕ್ಕಿನಮಾಂಸ ಮುಂತಾದ ಪ್ರಾಣಿಗಳ ಮಾಂಸದ ಜೊತೆಗೆ ಅರಳುಸೋರೆಹಕ್ಕಿಮಾಂಸ, ಉಣ್ಣೆಹಕ್ಕಿಮಾಂಸ, ಉರುಳಸಿಂಡಹಕ್ಕಿಮಾಂಸ, ಏರಿಸಿಡಿಲುಮಾಂಸ, ಕಟ್ಟಹಕ್ಕಿಮಾಂಸ, ಕಬುಟನಮಾಂಸ, ಕರ್ಬೋರಹಕ್ಕಿಮಾಂಸ, ಕಾಡಹಕ್ಕಿಮಾಂಸ ಇತ್ಯಾದಿ ಪಕ್ಷಿಗಳ ಮಾಂಸವನ್ನು ಹಿಂದೆ ಸೇವಿಸುತ್ತಿದ್ದರು. ಆದರೆ ಸರ್ಕಾರ ಬೇಟೆಯಾಡುವುದನ್ನು ನಿಷೇಧಿಸಿರುವುದ್ದರಿಂದ ಪ್ರಸ್ತುತ ಕುರಿ, ಕೋಳಿ, ಮೇಕೆ ಮಾಂಸವನ್ನು ಸೇವಿಸುತ್ತಾರೆ.

ಆನೆಕೆಚ್ಚಲು ಅಣಬೆ, ಆಭರಣೆ ಅಣಬೆ, ಉಪ್ಪರ್ಕಅಣಬೆ, ಕಟ್ಟೆಅಣಬೆ, ಕರಡಿಅಣಬೆ, ಕಾಚಿಅಣಬೆ, ಕಾರೆಅಣಬೆ, ಕಾಸರಕಅಣಬೆ, ಕುಳ್ಳಅಣಬೆ, ಕೊಡೆಅಣಬೆ, ಕೋಟೆಸುತ್ತೊಅಣಬೆ, ಗೊದ್ದ ಅಣಬೆ,

ತರ್ಗ್‌ಅಣಬೆ, ಬಿದಿರು ಮುಂಡ ಅಣಬೆ, ಬೀಕ ಅಣಬೆ, ಬುರ್ಜಅಣಬೆ, ಬೂರ್ಗದಅಣಬೆ, ಬೇರು ಅಣಬೆ, ಮುಂಜಿ ಅಣಬೆ, ಮೊಟ್ಟ ಅಣಬೆ, ಹುತ್ತದ ಹೂವು, ಹುತ್ತಬಳ್ಳ ಅಣಬೆ, ಹುಲ್ಲು ಅಣಬೆ ಮುಂತಾದವುಗಳನ್ನು ಕೂಡ ಆಹಾರದ ಭಾಗವಾಗಿ ಬಳಸುತ್ತಾರೆ.

**ವಿವಾಹ ಸಂಬಂಧಗಳು**

ಕರ್ನಾಟಕ ಮತ್ತು ತಮಿಳುನಾಡುಗಳ ಬೆಸುಗೆ ಪ್ರದೇಶ ಎನ್ನುವುದಕ್ಕೆ ಇರುಳಿಗರ ಭಾಷೆ ಪುಷ್ಠಿ ನೀಡುತ್ತದೆ. ಕರ್ನಾಟಕದ ಇರುಳಿಗರಿಗೂ ತಮಿಳುನಾಡಿನ ಇರುಳರಿಗೂ ಹೆಣ್ಣು ಕೊಟ್ಟು ತರುವುದು ಇಂದಿಗೂ ನಡೆದೇ ಇದೆ. ಉದಾಹರಣೆಗೆ ರಾಮನಗರ ತಾಲೂಕು ಬಸವಪುರ ಇರುಳಿಗರ ಕಾಲೋನಿಯ ಹೆಣ್ಣು ಮಗಳೊಬ್ಬಳನ್ನು ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆ, ಡೆಂಕಿಣಿಕೋಟೆ ತಾಲೂಕಿನ ಬ್ಯಾಲಾಳು (ಕನಕಪುರ ತಾಲೂಕಿನ ಮರಳವಾಡಿ ಹೋಬಳಿ ಕೇಂದ್ರದಿಂದ 9 ಕಿ.ಮೀ ದೂರ) ಎಂಬಲ್ಲಿಗೆ ಕೊಟ್ಟು ಮದುವೆ ಮಾಡಿದ್ದರೆ, ಕನಕಪುರ ತಾಲೂಕಿನ ಅನೇಕ ಇರುಳಿಗರು ತಮಿಳುನಾಡಿನಿಂದ ಹೆಣ್ಣು ತಂದು ಕೊಟ್ಟು ಸಂಬಂಧಗಳನ್ನು ಬೆಳೆಸಿರುವುದು ಸಾಮಾನ್ಯವಾಗಿದೆ. ಬುಡಕಟ್ಟುಗಳಲ್ಲಿ ಜಾತಿಗಳಲ್ಲಿ ಎಂತಹುದೇ ಬದಲಾವಣೆಗಳಾದರೂ ಸಂಬಂಧಗಳು ಏರ್ಪಡುವಲ್ಲಿ ಮಾತ್ರ ಯಾವುದೇ ಬದಲಾವಣೆಗೆ ಅವಕಾಶಗಳಿರುವುದಿಲ್ಲ. ಇಲ್ಲಿ ತಮಿಳುನಾಡಿನ ಇರುಳಿಗರ ಎಲ್ಲಾ ಆಚಾರ–ವಿಚಾರ, ಸಂಪ್ರದಾಯಗಳನ್ನು ಹೊಂದಿರುವುದು, ಹೆಣ್ಣು–ಗಂಡು ಕೊಟ್ಟು ತರುವ ಅವರೇ ಕರೆದುಕೊಳ್ಳುವ ಕಾಡುಪೂಜಾರಿಗಳು, ಅಕ್ಕಪಕ್ಕದ ಅನ್ಯರು ಕರೆಯುವ ಇಲ್ಲಿಗರು ಅಥವಾ ಕಾಡಿರುಳಿಗರು ಮತ್ತು ಸರ್ಕಾರ ನಾಮಕರಣ ಮಾಡಿರುವ ಇರುಳಿಗರೂ ಒಂದೇ ಎಂಬುದಕ್ಕೆ ಆಧಾರಗಳಾಗುತ್ತವೆ.

**ಆರ್ಥಿಕ ಜೀವನ**

ಇವರ ಕುಲಕಸುಬು – ಕತ್ತಲೆಯಲ್ಲಿ ಜೇನು ಬಸಿಯುವುದು, ಬುಟ್ಟಿ ಎಣೆಯುವುದು, ಮುಖ್ಯವಾಗಿ ತಮಿಳುನಾಡಿನ ವೆಟ್ಟಕಾರನ್ ಇರುಳರು ಇಲಿಯನ್ನು ಹಿಡಿಯುವುದು, ಹಾವುಗಳನ್ನು ಹಿಡಿಯುವುದರಲ್ಲಿ ಪರಿಣಿತರಾಗಿದ್ದು ಈ ಸಮುದಾಯದವರು ಒಂದು ಸಹಕಾರ ಸಂಘವನ್ನು ಕಟ್ಟಿಕೊಂಡಿದ್ದಾರೆ. ಇವರು ವಾಸಿಸುವ ಮನೆ ಮತ್ತು ಅದರ ಸುತ್ತ ಇರುವ ಹತ್ತಿಪ್ಪತ್ತು ಅಡಿ ಜಾಗ ಮಾತ್ರ ಇವರದು. ಉಳಿದ ಭೂಮಿ ಇವರದಲ್ಲ. ನೂರಾರು ವರ್ಷಗಳಿಂದ ಈ ಬುಡಕಟ್ಟು ಸಮುದಾಯ ಅರಣ್ಯದ ಆವರಣದಲ್ಲಿ ಬದುಕಿ ಬಂದಿದ್ದರೂ ಅಲ್ಲಿಯ ಭೂಮಾಲಿಕತ್ವದ ಒಡೆತನ ಅವರಿಗಿಲ್ಲ. ಸಾಮಾನ್ಯವಾಗಿ ಬುಡಕಟ್ಟು ಸಮುದಾಯಗಳು ಆರಂಭದ ಶತಮಾನಗಳನ್ನು ಕೇವಲ ಗುಹೆಗಳಲ್ಲಿ ವಾಸ ಮಾಡುತ್ತಾ, ಭೇಟೆ ಮಾಡುತ್ತಾ ಬದುಕಿ ಬಂದಿದ್ದಾರೆ. ಆದರೆ ಆಧುನಿಕ ವಿದ್ಯಾಮಾನಗಳು ಬದಲಾಗುತ್ತಾ ಬಂದಾಗಲೂ ಇವರ ಬದುಕಿನ ಕ್ರಮ ಬೇರೆಯಾಗಲಿಲ್ಲ. ತೋಟಗಳಲ್ಲಿ ಇರುಳಿಗರು ಕೃಷಿ ಕೂಲಿಗಳಾಗಿ ಕೆಲಸ ಮಾಡಿಕೊಂಡಿದ್ದಾರೆ. ಮಾವಿನ ತೋಪುಗಳಲ್ಲಿ ಕೂಲಿ, ಅರಣ್ಯಗಳ ಪ್ಲಾಂಟೇಶನ್ ಕೆಲಸ, ಮರ ಕಡಿಯುವುದು, ಕೋಕೋ ತೋಟ ಕೆಲಸ, ರಬ್ಬರ್ ತೋಟದಲ್ಲಿ ಕೆಲಸ, ಕಾಡು ಕಡಿಯುವುದು, ಹೀಗೆ ಇನ್ನು ಮುಂತಾದ ಕೆಲಸಗಳನ್ನು ಮಾಡಿಕೊಂಡಿದ್ದಾರೆ. ಇವರು ಮಾಡುವ ಕೆಲಸಕ್ಕೆ ತುಂಬಾ ಕಡಿಮೆ ಕೂಲಿಯನ್ನು ಪಡೆಯುವರು ಅಂದರೆ, ಗಂಡಸರಿಗೆ ದಿನ ಒಂದಕ್ಕೆ 150ರೂ ಕೂಲಿ, ಹೆಂಗಸರಿಗೆ ದಿನ ಒಂದಕ್ಕೆ 120ರೂ ಕೂಲಿ ಪಡೆಯುವರು.

ಶೈಕ್ಷಣಿಕ ಅರ್ಹತೆಯನ್ನು ಪಡೆದಂತಹ ಇರುಳಿಗರ ಗಂಡು ಮತ್ತು ಹೆಣ್ಣು ಮಕ್ಕಳು ಉದ್ಯೋಗವನ್ನು ಹುಡುಕಿಕೊಂಡು ಬೆಂಗಳೂರು, ಹೊಸೂರು, ರಾಮನಗರ ಹಾಗೂ ತಮಿಳುನಾಡಿನ ಖಾಸಗಿ ಕಂಪನಿಗಳಲ್ಲಿ ಗಾರ್ಮೆಂಟ್ಸ್‌ಗಳಲ್ಲಿ, ಹೋಟೆಲ್‌ಗಳಲ್ಲಿ, ತಾತ್ಕಾಲಿಕ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಮತ್ತೆ ಕೆಲವರು ಸರ್ಕಾರಿ ನೌಕರರಾಗಿ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ವಕೀಲರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇತ್ತೀಚೆಗೆ ಇವರ ಮಕ್ಕಳು ಸರ್ಕಾರಿ ಶಾಲೆಗಳು ಮತ್ತು ಗಿರಿಜನ ಆಶ್ರಮ ಶಾಲೆಗಳಿಗೆ ಸೇರಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ.

**ಧಾರ್ಮಿಕ ಜೀವನ**

ಮಾನವ ಜೀವನವನ್ನು ರೂಪಿಸುವಲ್ಲಿ ಸಂಸ್ಕೃತಿಯನ್ನು ಪೋಷಿಸುವಲ್ಲಿ ನಾಗರೀಕತೆಯನ್ನು ಬೆಳೆಸುವಲ್ಲಿ, ಸಂಘಟನೆ, ಸಹಬಾಳ್ವೆ, ಶಾಂತಿ, ನಂಬಿಕೆಯನ್ನು ಮೂಡಿಸುವಲ್ಲಿ ಹಬ್ಬಗಳಿಗೆ ವಿಶೇಷ ಮಹತ್ವವಿದೆ. ಕೃಷಿ ಮತ್ತು ಪಶುಸಂಗೋಪನೆ ಪ್ರಮುಖವಾಗಿರುವ ಇರುಳಿಗರು ನೈಸರ್ಗಿಕ ಶಕ್ತಿಯನ್ನು ವೃದ್ಧಿಸುವ, ನಿಸರ್ಗದೊಡನೆ ಅವಿನಾಭಾವ ಸಂಬಂಧವನ್ನು ಬೆಳೆಸುವ ಹಬ್ಬಗಳ ಆಚರಣೆಯನ್ನು ರೂಢಿಸಿಕೊಂಡು ಬಂದಿದ್ದಾರೆ. ಇರುಳಿಗರು ಮುಖ್ಯವಾಗಿ ಸಂಕ್ರಾಂತಿ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ. ಸಾಮಾನ್ಯವಾಗಿ ಬುಡಕಟ್ಟುಗಳದು ಅವರದೇ ಆದ ಸಾಮೂಹಿಕ ಜಾತ್ರೆಗಳು ಹಬ್ಬಗಳು, ಕೃಷಿ ಸಂಬಂಧದ ಆಚರಣೆಗಳನ್ನು ಆಚರಿಸುತ್ತಾರೆ. ಅದರಲ್ಲಿ ವಿಶೇಷವಾಗಿ ಈರ್ರಬ್ಬ ಹಬ್ಬವನ್ನು ನೋಡಬಹುದು.

**ಈರ್ರಬ್ಬ, ಈರಗಾರರ ಹಬ್ಬ, ವೀರರ ಹಬ್ಬ ಅಥವಾ ಹಿರೀಕರ ಹಬ್ಬ**

ಇರುಳಿಗರ ಮುಖ್ಯವಾದ ಹಬ್ಬವೆಂದರೆ ಈರ್ರಬ್ಬ ಅಥವಾ ಈರಗಾರರ ಹಬ್ಬ. ಇದು ಅವರ ಕುಲದೇವತೆಯ ಆರಾಧನೆಯ ಪ್ರತೀಕ. ಸತ್ತ ಹಿರಿಯರನ್ನು ಪೂಜಿಸುವ, ಈರಗಾರರ ಹಬ್ಬ ಎಂಬ ಹೆಸರಿನಲ್ಲಿ ನಡೆಯುವ ಹಿರಿಯರ ಹೆಸರಿನಲ್ಲಿ ಮಾಡುವ ದೇವತೆಗಳ ಆರಾಧನೆಯಾಗಿದೆ. ಈ ಹಬ್ಬವನ್ನು ಪ್ರತೀ ವರ್ಷ ಸಾಂಕೇತಿಕವಾಗಿ ಆಚರಿಸುತ್ತಾ, ಮೂರು ವರ್ಷಗಳಿಗೊಮ್ಮೆ ವಿಜೃಂಭಣೆಯಿಂದ ಆಚರಿಸುತ್ತಾರೆ. ಬೆಂಗಳೂರು ಆನೇಕಲ್ ತಾಲೂಕಿನ ಕಗ್ಗಲಿಪುರದ ಬಳಿಯಿರುವ ದಿಣ್ಣೆಪಾಳ್ಯ, ಬನ್ನೇರುಘಟ್ಟದ ಬಳಿಯಿರುವ ಭೂತೇನಹಳ್ಳಿ ಹಕ್ಕಿಪಿಕ್ಕಿ ಕಾಲೋನಿ, ಆನೇಕಲ್ ತಾಲೂಕಿನ ರಾಗಿಹಳ್ಳಿ, ಅಣ್ಣಯ್ಯನದೊಡ್ಡಿ, ತಿಮ್ಮನದೊಡ್ಡಿ, ಶಿವನಹಳ್ಳಿ, ಕಾಟೇರಪ್ಪನದೊಡ್ಡಿ, ಸೊಳ್ಳೆಪುರ, ಮಾದಯ್ಯನದೊಡ್ಡಿ ಇತ್ಯಾದಿ ಊರುಗಳೂ ಸೇರಿ ರಾಗಿಹಳ್ಳಿಯ ಬಂಡೆಯ ಮೇಲೆ, ಕನಕಪುರ ತಾಲೂಕಿನ ಹಲವಾರು ಕಡೆಗಳಲ್ಲಿ ಮಾಗಡಿ ತಾಲೂಕಿನ ಜೋಡುಗಟ್ಟೆ ಮುಂತಾದ ಕಡೆಗಳಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ. ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಡೆಂಕಣಿಕೋಟೆ ತಾಲ್ಲೂಕಿನ ಮೂಗಂಡುಗ ಎಂಬಲ್ಲಿ ಹಾಗೂ ಹಲವಾರು ಇರುಳಿಗರ ಹಳ್ಳಿಗಳಲ್ಲಿ ಈ ಹಬ್ಬವನ್ನು ವಿಜೃಂಬಣೆಯಿಂದ ಆಚರಿಸುತ್ತಾರೆ.

**ಉಪಸಂಹಾರ**

ಇರುಳಿಗರು ಇಲ್ಲಿವರೆಗೂ ಒಂದು ಸರಳವಾದ ಗುಡಿಸಲನ್ನು ಕಟ್ಟಿಕೊಂಡು ಅದರಲಿಯೇ ಅವರ ಕುಟುಂಬಕ್ಕೆ ಬೇಕಾದ ಸವಲತ್ತುಗಳನ್ನು ಒದಗಿಸಿಕೊಂಡು ಬದುಕುತ್ತಿದ್ದರು. ಇಂದು ಕೆಲವರು ಹೆಂಚಿನ ಮನೆಗಳಲ್ಲಿ ವಾಸಿಸುವ ಸಂಸ್ಕೃತಿಯನ್ನು ರೂಢಿಸಿಕೊಳ್ಳುತ್ತಿದ್ದಾರೆ. ಮಣ್ಣಿನ ಮಡಕೆಯನ್ನು ಮಾತ್ರ ಬಳಸುತ್ತಿದ್ದ

ಇರುಳಿಗರು ಅವುಗಳನ್ನು ಕ್ರಮೇಣ ಮರೆಯುತ್ತಿದ್ದಾರೆ. ಮಣ್ಣಿನ ಪಾತ್ರೆಗಳ ಸ್ಥಾನವನ್ನು ಹಿತ್ತಾಳೆ, ಅಲ್ಯುಮಿನಿಯಂ, ಸ್ಟೀಲ್ ಪಾತ್ರೆಗಳು ಆಕ್ರಮಿಸುತ್ತಿವೆ. ವನಸ್ಪತಿಗಳಿಂದ ಬೆಳಕು ಪಡೆಯುತ್ತಿದ್ದವರು ಸೀಮೆಎಣ್ಣೆ ದೀಪಗಳಿಂದ ಬೆಳಕು ಪಡೆಯುತ್ತಿದ್ದಾರೆ. ಕುಮರಿ ಬೇಸಾಯ ಮಾಡುತ್ತಿದ್ದ ಇರುಳಿಗರು ಒಂದೆಡೆ ನಿಂತು ವ್ಯವಸಾಯ ಮಾಡುತ್ತಿದ್ದಾರೆ. ಇರುಳಿಗರ ಸಾಂಸ್ಕೃತಿಕ ಆಚರಣೆಗಳ ಸಂದರ್ಭದಲ್ಲಿ ಬ್ರಾಹ್ಮಣ ಪೌರೋಹಿತ್ಯಕ್ಕೆ ಅವಕಾಶವೀಯುತ್ತಿರಲಿಲ್ಲ. ಇಂದು ಇವರ ಮದುವೆ ಬ್ರಾಹ್ಮಣ ಪೌರೋಹಿತ್ಯದಲ್ಲಿ ನಡೆಯುತ್ತಿದೆ. ಇಷ್ಟೆಲ್ಲಾ ಬದಲವಣೆಗಳಾದರೂ ಹೆಚ್ಚು ಇರುಳಿಗರು ತೀರಾ ಹಿಂದುಳಿದವರು. ಸರ್ಕಾರದಿಂದ ಇವರ ಹೆಸರಿನಲ್ಲಿ ಮಂಜೂರಾದ ಹೆಚ್ಚಿನ ಯೋಜನೆಗಳು ಮಧ್ಯವರ್ತಿಗಳ ಪಾಲಾಗುತ್ತಿವೆ. ಬುಡಕಟ್ಟುಗಳ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನೇಕ ಅತ್ಯುತ್ತಮ ಯೋಜನೆಗಳನ್ನು ಹಾಕಿಕೊಂಡಿವೆ. ಆದರೆ ಯೋಜನೆಗಳ ಅನುಷ್ಠಾನದಲ್ಲಿ ಪ್ರಾಮಾಣಿಕತೆ ಇಲ್ಲವಾಗಿರುವ ಕಾರಣ ಜನರನ್ನು ತಲುಪದೆ ಮಧ್ಯವರ್ತಿಗಳ ಪಾಲಾಗುತ್ತಿದೆ. ಯೋಜನೆಗಳನ್ನು ರೂಪಿಸುವಾಗ ಆ ಯೋಜನೆಯ ಫಲಾನುಭವಿಗಳ ಬೇಡಿಕೆ ಅಥವಾ ಅವಶ್ಯಕತೆಗಳನ್ನು ಕೇಳಿ ತಿಳಿದುಕೊಂಡು ಅನುಷ್ಠಾನಕ್ಕೆ ತರುವುದು ಒಳ್ಳೆಯದು. ನಿಜವಾದ ಅರ್ಥದಲ್ಲಿ ಇರುಳಿಗರು ನಿರ್ಗತಿಕರು. ಆದರೂ ಭಿಕ್ಷೆ ಬೇಡುವವರಲ್ಲ. ಸ್ವಂತ ಭೂಮಿ ಇಲ್ಲ ಅನೇಕ ಬಗೆಯ ರೋಗಗಳಿಗೆ ಇನ್ನೂ ಸಾಂಪ್ರದಾಯಿಕ ಚಿಕಿತ್ಸೆಯನ್ನೇ ಪಡೆಯುತ್ತಿದ್ದಾರೆ. ಆ ರೀತಿಯ ಸಾಂಪ್ರದಾಯಿಕ ಚಿಕಿತ್ಸೆಗಳನ್ನು ವ್ಯವಸ್ಥಿತವಾಗಿ ಕೊಡಮಾಡುವ ಅವಶ್ಯಕತೆಯಿದೆ. ಶಿಕ್ಷಣದ ಮಹತ್ವ ಸರಿಯಾಗಿ ತಿಳಿಯದೆ, ಶೈಕ್ಷಣಿಕ ಅರ್ಹತೆಗಳಿಲ್ಲದ ಕಾರಣ ಸರ್ಕಾರಿ ಕೆಲಸ ಗಗನ ಕುಸುಮವಾಗಿದೆ. ಕಾಡು ಕಾಯುವ ವಾಚರ್‌ಗಳಾಗಿ, ದಣಿಗಳ ಮನೆಯ ಜೀತದಾಳುಗಳಾಗಿ ಇನ್ನೂ ಎಷ್ಟೋ ಜನ ಇರುಳಿಗರು ಅಸಹ್ಯಕರವಾದ ಜೀವನ ನಡೆಸುತ್ತಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಕುರುವ ಬಸವರಾಜು. (2000). ಇರುಳರು. ಇಲ್ಲಿ ಲಕ್ಕಪ್ಪಗೌಡ ಹೆಚ್.ಜಿ (ಸಂ.). ಕರ್ನಾಟಕದ ಬುಡಕಟ್ಟುಗಳು ಸಂ.1, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
- ಕಂಬಳ ಬಿ. ಸಿದ್ಧಲಿಂಗಯ್ಯ. (1993). ಇಲ್ಲಿಗರ ಸಂಸ್ಕೃತಿ. ಕನಕ ಸಾಹಿತ್ಯ ಅಕಾಡೆಮೆ, ಬೆಂಗಳೂರು.
- ಬೈರೇಗೌಡ. ಎಂ., 2000. ಇರುಳಿಗರು: ಜಾನಪದ ಅಧ್ಯಯನ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು.
- Anantha Krishna Iyer L. K . (1930). The Mysore Tribes And Castes “ Vol-3 Mysore The Mysore University.
- Manjunatha B R, Annapurna M. and Shylaja K. (2014). Socio-Economic Life of Iruliga Tribe in Karnataka, Anteroom Online Journal of Anthropology, Vol. 10. No-1.